ಹಿಂದಿಯ ಪ್ರಸಿದ್ಧ ಲೇಖಕ ರವಿ ಶರ್ಮಾ 'ಮಧುಪ್' ಹಿಂದಿ ಭಾಷೆ ಮತ್ತು ವ್ಯಂಗ್ಯ ಬರಹಗಳ ಬಗ್ಗೆ ಆಸಕ್ತಿ ತಳೆದವರು. ಅನೇಕ ದೇಶಗಳಿಗೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರತಿನಿಧಿಯಾಗಿ ತೆರಳಿ, ಭಾಷೆಯ ಕುರಿತು ತಮ್ಮ ನಿಲುವು ಮಂಡಿಸಿದ್ದಾರೆ. ಪ್ರಸ್ತುತ ಇವರು ದೆಹಲಿಯ ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ದಿನಗಳಲ್ಲಿ ತಂದೆ– ತಾಯಿಯೇ ತಮ್ಮ ಮಕ್ಕಳನ್ನು ತಡೆಯಲು ಸಾಧ್ಯವಾಗುತ್ತಿಲ್ಲ, ಅಂಥದ್ದರಲ್ಲಿ ಶಿಕ್ಷಕರು ಇಂಥ ಅಸಾಧಾರಣ ರಿಸ್ಕ್ ತೆಗೆದುಕೊಳ್ಳುವ ಆವಶ್ಯಕತೆ ಏನಿದೆ?

ಪ್ರಿನ್ಸಿಪಾಲರು ಎಲ್ಲಾ ವಿಷಯಗಳನ್ನು ಕೇಳಿದರು, ಅರ್ಥ ಮಾಡಿಕೊಂಡರು. ನಂತರ ವಿಷಯವನ್ನು ಬಗೆಹರಿಸಲು ಒಂದು ವಿಶೇಷ ಸಮಿತಿಯನ್ನು ರಚಿಸಲು ಯೋಚಿಸಿದರು. ಪ್ರತಿಯೊಬ್ಬ ತಿಳಿವಳಿಕಸ್ತ ಪ್ರಾಂಶುಪಾಲರು ಹೀಗೆಯೇ ಮಾಡುತ್ತಾರೆ. ಈ ಹೊಸ ಸಮಿತಿಯ ನಾಮಕರಣಕ್ಕೆ ಸಂಬಂಧಿಸಿದಂತೆಯೂ ಸಾಕಷ್ಟು ವಾದ– ವಿವಾದಗಳು ನಡೆದವು. ವಾದ-ವಿವಾದವಿಲ್ಲದ ಸಮಿತಿಗಳು ಸಮಿತಿಗಳೇ! ಒಬ್ಬ, ಇದರ ಹೆಸರು 'ನಾಯಿ ತೊಲಗಿಸಿ ಸಮಿತಿ' ಆಗಬೇಕು ಎಂದ. ವಿರೋಧ ಪಕ್ಷ ಕೂಡಲೇ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಾ, 'ನಾಯಿಯ ರಕ್ಷಣಾ ಸಮಿತಿ' ಎಂದು ಸೂಚಿಸಿತು. ಒಂದು ಹೆಸರಿಗೆ ಸಮ್ಮತಿ ಬರದಿರುವುದನ್ನು ಗಮನಿಸಿದಾಗ, ಇದಕ್ಕೆ 'ನಾಯಿ ಸಮಿತಿ' ಎಂದೇ ನಾಮಕರಣ ಮಾಡೋಣವೆಂಬ ಪ್ರಸ್ತಾವ ಬಂತು. ಇದಕ್ಕೂ ವಿರೋಧ ವ್ಯಕ್ತವಾಯಿತು. ನಾಯಿ ಸಮಿತಿಯ ಸದಸ್ಯರನ್ನು ಏನೆಂದು ಕರೆಯುವುದು ಎಂಬ ಪ್ರಶ್ನೆ ಉದ್ಭವಿಸಿತು. ಕಡೆಗೆ, ಒಳ್ಳೆಯ ಹೆಸರು ಹೊಳೆಯುವವರೆಗೆ 'ನಾಯಿ ಸಮಿತಿ'ಯೇ ಇರಲಿ ಎಂಬ ತೀರ್ಮಾನಕ್ಕೆ ಬರಲಾಯಿತು. ನಮ್ಮ ದೇಶದಲ್ಲಿ ಒಮ್ಮೆ ಚಲಾವಣೆಯಾದ ಹೆಸರು ಸುಲಭವಾಗಿ ಬದಲಾಗುವುದಿಲ್ಲ. ವ್ಯಕ್ತಿ ಸಹ ತನ್ನ ಹೆಸರನ್ನು ಬದಲಾಯಿಸಲು ಸಾಕಷ್ಟು ಒದ್ದಾಡಬೇಕಾಗುತ್ತದೆ. ಪತ್ರಿಕೆಗಳಲ್ಲಿ ಜಾಹೀರಾತನ್ನು ಕೊಡಬೇಕಾಗುತ್ತದೆ, ಶಪಥಪತ್ರ ಅಥವಾ ಘೋಷಣೆಯ ಪತ್ರವನ್ನು ಕೊಡ ಬೇಕಾಗುತ್ತದೆ. ಅಂಥದ್ದರಲ್ಲಿ ಕಾಲೇಜಿನ ಸಮಿತಿಯ ಹೆಸರನ್ನು ಬದಲಾಯಿಸುವುದು ನಗೆ ಮಾತಲ್ಲ.

ಕಾಲೇಜಿನಲ್ಲಿ ನಾಯಿ ಸಮಿತಿಯನ್ನು ರಚಿಸಲಾದ ವಿಷಯ ಕಾಡಿನಲ್ಲಿ ಬೆಂಕಿ ಹಬ್ಬಿದಂತೆ ವ್ಯಾಪಿಸಿತು. ಇಡೀ ವಿಶ್ವವಿದ್ಯಾಲಯದಲ್ಲಿ ಕೋಲಾಹಲವುಂಟಾಯಿತು. ನಾಯಿ ಸಮಿತಿಯ ಸಭೆಗಳು ನಡೆಯಲಾರಂಭಿಸಿದವು. ನಾಯಿಗಳು ಕಚ್ಚಿದ ಪ್ರಕರಣಗಳ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ಕಳೆದ ವರ್ಷಗಳಲ್ಲಿ ಕಾಲೇಜಿನ ನಾಯಿಗಳು ಎಷ್ಟು ಜನರಿಗೆ ಕಚ್ಚಿವೆ, ನಾಯಿಗಳ ಸಂಖ್ಯೆಯಲ್ಲಿ ವೃದ್ಧಿಯ ಪ್ರಮಾಣ ಎಷ್ಟು, ಕಾಲೇಜಿನ ನಾಯಿಗಳ ಒಟ್ಟು ಸಂಖ್ಯೆ ಎಷ್ಟಿದೆ, ಬೇರೆ-ಬೇರೆ ಕಾಲೇಜುಗಳಿಂದ ಎಷ್ಟು ನಾಯಿಗಳು ಇಲ್ಲಿಗೆ ಬಂದು ನೆಲೆಸಿವೆ, ಎಷ್ಟು ಜನರು ನಾಯಿಗೆ ಆಹಾರ ಹಾಕುತ್ತಾರೆ, ಎಷ್ಟು ಜನರು ನಾಯಿಯ ವಿರುದ್ಧವಾಗಿ ದೂರುಗಳನ್ನು ಸಲ್ಲಿಸುತ್ತಾರೆ, ಇತ್ಯಾದಿ– ಇತ್ಯಾದಿ.

ನಾಯಿ ಸಮಿತಿಯ ಕಾರ್ಯ-ಕಲಾಪಗಳು ಮುಂದುವರಿದಂತೆ, ಕಾಲೇಜಿನ ಒಗ್ಗಟ್ಟು ಡೋಲಾಯಮಾನವಾಯಿತು. ಆದರೆ, ನಾಯಿಗಳ ಒಗ್ಗಟ್ಟು ಹೆಚ್ಚಿತು. ಕಾಲೇಜಿನಲ್ಲಿ ನಾಯಿ ಸಮರ್ಥಕರು ಮತ್ತು ನಾಯಿ ವಿರೋಧಿಗಳ ಗುಂಪು ಸೃಷ್ಟಿಯಾಯಿತು.

ನಾಯಿ ಸಮರ್ಥಕರು ಹೇಳಿದರು, 'ಪಾಪ, ಬಡಪಾಯಿ ನಿರ್ದೋಷಿ ನಾಯಿಗಳು ತಮ್ಮ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳನ್ನು ವಿರೋಧಿಸಲಾರವು, ಹೀಗಾಗಿ ನಾವು ಅವುಗಳ ಹಕ್ಕಿಗಾಗಿ ಹೋರಾಡುವುದು ನಮ್ಮ ನೈತಿಕ ಹೊಣೆಯಾಗಿದೆ.'

ವಾಸ್ತವವಾಗಿ ಪ್ರತಿಯೊಂದು ಸಂಸ್ಥೆಯಲ್ಲಿ ಒಂದು ವರ್ಗ ಆಡಳಿತ ವಿರೋಧಿಯಾಗಿರುತ್ತದೆ. ಒಂದು ಕೆಲಸವನ್ನು ಹಾಳು ಮಾಡುವುದು, ಆಡಳಿತ ಪಕ್ಷದ ಎಲ್ಲಾ ಕೆಲಸಗಳನ್ನು ವಿರೋಧಿಸುವುದು ಅದರ ಕೆಲಸವಾಗಿರುತ್ತದೆ. ಇಂಥ ವರ್ಗ ಸದಾ ಯಾವುದಾದರೂ ವಿಷಯವನ್ನು ಹುಡುಕುತ್ತಿರುತ್ತದೆ. ಆ ಕಾಲೇಜಿನಲ್ಲೂ ಇಂಥ ವರ್ಗವೊಂದಿತ್ತು,

